ಎಂ.ಎಸ್. ಆಶಾದೇವಿ

# ಸ್ಫೋಟಕ ಪ್ರತಿಭೆಯ ಅನಾವರಣ

ಕನ್ನಡ ಮಾತ್ರವಲ್ಲ, ಭಾರತೀಯ ಬೌದ್ಧಿಕ ಲೋಕವನ್ನು ತನ್ನ ಸ್ಫೋಟಕ ಪ್ರತಿಭೆಯಿಂದ ನಿಬ್ಬೆರಗಾಗಿಸಿದ ಕವಿ ಪ್ರತಿಭೆಯ ವಿದ್ವಾಂಸ ಡಿ.ಆರ್. ನಾಗರಾಜ್. ವಿದ್ವತ್ತಿಗೂ ಕವಿ ಪ್ರತಿಭೆಗೂ ಸಂಬಂಧವಿರುವುದು ಸಾಧ್ಯವಿಲ್ಲ ಎನ್ನುವ ಗ್ರಹಿಕೆಯನ್ನೇ ಅಲ್ಲಗಳೆಯುವಂತಹ ಅಪವಾದದ ವ್ಯಕ್ತಿತ್ವ ಮತ್ತು ಬರವಣಿಗೆ ಡಿ.ಆರ್.ಎನ್ ಅವರದು. ಈ ಎರಡರ ಜೊತೆಗೆ ಅವರ ಮೂಲಕ್ಷೇತ್ರವೇ ಎನ್ನಬಹುದಾದ ಸಾಮಾಜಿಕ ನ್ಯಾಯದ ಆಯಾಮವೂ ಸೇರಿಕೊಂಡಿತ್ತು. ಸ್ವಾತಂತ್ರ್ಯೋತ್ತರ ಭಾರತದ ಎರಡನೆಯ ಘಟ್ಟದ ಆಶೋತ್ತರಗಳನ್ನೆಲ್ಲ ಡಿ.ಆರ್. ತಾತ್ವಿಕವಾಗಿ ಪ್ರತಿನಿಧಿಸಿದರು ಎನ್ನುವುದು ಖಂಡಿತವಾಗಿಯೂ ಉತ್ಪ್ರೇಕ್ಷೆಯ ಮಾತಲ್ಲ. ಇದನ್ನು ಹೀಗೂ ಹೇಳಬಹುದು. ಅಂಬೇಡ್ಕರ್ ಮತ್ತು ಗಾಂಧಿ ಪ್ರಯತ್ನಿಸಿದ 'ಭಾರತ'ದ ಕಲ್ಪನೆಯನ್ನು ಸಮೀಕರಿಸುವ ಮಹತ್ವಾಕಾಂಕ್ಷೆಯನ್ನು ಡಿ.ಆರ್. ಅವರ ಎರಡನೆಯ ಘಟ್ಟದಲ್ಲಿ ಬಲು ಉತ್ಕಟವಾಗಿ ಹೊಂದಿದ್ದರು. ಸಾಹಿತ್ಯ ಮೀಮಾಂಸೆಯನ್ನು, ಸಾಮಾಜಿಕ, ರಾಜಕೀಯ ಮೀಮಾಂಸೆಯನ್ನು, ಸಾಂಸ್ಕೃತಿಕ ಮೀಮಾಂಸೆಯನ್ನು ಬೆಸೆಯುವ ಮೂಲಕ ಈ ತನಕ ಸಾಧ್ಯವಾಗದಿದ್ದ ಸಮುದಾಯ ಮೀಮಾಂಸೆಯನ್ನು ಕಟ್ಟಲು ಡಿ.ಆರ್ ಪ್ರಯತ್ನಿಸಿದರು. ಆ ತನಕದ ಶಿಷ್ಟ ಮೀಮಾಂಸೆಯನ್ನು ಎದುರಾಗುತ್ತಲೇ ವಿಸ್ಮೃತಿಗೆ ಸಂದ ತಳವರ್ಗದ ಸಾಂಸ್ಕೃತಿಕ ಮೀಮಾಂಸೆಯನ್ನು ಅದರೆಲ್ಲ ಆಯಾಮಗಳಲ್ಲಿ ಸ್ಥಾಪಿಸುತ್ತಾ ಹೋದರು. ಪ್ರಶ್ನಿಸಲಾಗದ ಅಧಿಕೃತತೆಯನ್ನು ಅದಕ್ಕೆ ತಂದುಕೊಡುತ್ತಲೇ ಶಿಷ್ಟ ಮೀಮಾಂಸೆಯ, ಪಟ್ಟಭದ್ರ ನೆಲೆಗಳನ್ನು ಒಡೆಯುವ ಪ್ರಯತ್ನವನ್ನು ವಿದ್ವತ್ತಿನ ಬಲದಿಂದಲೇ ಮಾಡುತ್ತಾ ಹೋದರು. ಯಾವ ವಿದ್ವತ್ತನ್ನು ಆ ತನಕ ಕಣ್ಕಟ್ಟಿನಂತೆ ಬಳಸಲಾಗುತ್ತಿತ್ತೋ ಅದೇ ವಿದ್ವತ್ತನ್ನು ಡಿ.ಆರ್. ಆ ಕಣ್ಕಟ್ಟನ್ನು ಸರಿಸಲು ಬಳಸಿದರು. ಅಂಬೇಡ್ಕರ್‌ವಾದವನ್ನು ತಮ್ಮ ಸಾಂಸ್ಕೃತಿಕ ಅರಿವಿನಿಂದ ಇನ್ನೂ ಘನವಾಗಿ ಶಕ್ತಗೊಳಿಸಿದ ಹೆಗ್ಗಳಿಕೆ ಡಿ.ಆರ್. ಅವರದು. ಈ ದೃಷ್ಟಿಯಿಂದ ಡಿ.ಆರ್. ಅವರು ಅಂಬೇಡ್ಕರ್ ಅವರ ಉತ್ತರಾಧಿಕಾರಿ ಎನ್ನುವುದು ಉತ್ಪ್ರೇಕ್ಷೆಯೂ ಅಲ್ಲ, ಅಪವ್ಯಾಖ್ಯಾನವೂ ಅಲ್ಲ. ಡಿ.ಆರ್. ಅವರ ಬರವಣಿಗೆಯ ಪ್ರಬಂಧ ಧ್ವನಿ ಇದೇ ಆಗಿದೆ. ಸದ್ಯದ ಪರಿಸ್ಥಿತಿಯಲ್ಲಂತೂ ಡಿ.ಆರ್. ಅವರ ತಾತ್ವಿಕತೆಯು ತುರ್ತಾಗಿ ಅಳವಡಿಕೆಯಾಗಬೇಕಾಗಿದೆ ಎಂದು ಅನ್ನಿಸುತ್ತದೆ.

ಶಿವರಾಜ ಬ್ಯಾಡರಹಳ್ಳಿಯವರು ಸಂಪಾದಿಸಿರುವ ಡಿ.ಆರ್. ನಾಗರಾಜ್ ಅವರನ್ನು ಕುರಿತ ಲೇಖನಗಳ ಸಂಕಲನ 'ಅನನ್ಯ ಪ್ರತಿಭೆಯ ಪರಿ' ಈ ಅಂಶವನ್ನು ಸಂದೇಹಾತೀತವಾಗಿ ಸ್ಥಾಪಿಸುತ್ತದೆ. 10 ಭಾಗಗಳಲ್ಲಿ ಹರಡಿರುವ ಈ ಕೃತಿಯು ಡಿ.ಆರ್. ಅವರನ್ನು ಅವರ ಬಹುಮುಖೀ ಆಯಾಮಗಳಲ್ಲಿ ಗುರುತಿಸುವ ಪ್ರಯತ್ನ ಮಾಡುತ್ತದೆ. ಸಾಹಿತ್ಯದಿಂದ ಆರಂಭವಾದ ನಾಗರಾಜ್ ಅವರ